ಶ್ರೀ ಸುಬಾಷ್ ಅನ್ನೂರೆ.—ಈಗಾಗಲೇ ಸಾಕಷ್ಟು ಹಣ ಇದರಲ್ಲಿ ಖರ್ಚಾಗುತ್ತಿದೆ. ಅದನ್ನು ಈಗ ಪ್ರತ್ಯೇಕವಾಗಿ ಸರ್ಕಾರದ ಮಟ್ಟದಲ್ಲಿ ತಗೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಆಗ ಬೇಗ ಆಗುವುದಿಲ್ಲ. ಅದೇ ಉದ್ದೇಶದಿಂದ ಕೊಆಪರೇಟಿವ್ ಸೊಸೈಟಿಯ ಮೂಲಕ ಮಾಡುತ್ತೇವೆ. ಏಕೆಂದರೆ ಜನರಲ್ಲಿ ರೊಕ್ಕವಿಲ್ಲ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಂದ ಹಣ ಪಡೆದು ಆದಷ್ಟು ಬೇಗ ಈ ಒಂದು ಯೋಜನೆಯನ್ನು ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇನೆ.

Utilisation of Excess of Water in Haluvagilu Canal

527. **Sri K. H. HANUME GOWDA** (Hassan).—

Will the Minister of State for Minor Irrigation be pleased to state :—

(*a*) whether it bas come to the notice of Government that the excess water in the canal of Haluvagilu of Hassan block is re-flowing to the stream unused ;

(*b*) whether it has come to the notice of Government that if the said canal is extended 3 miles further hundreds of additional dry-lands will b.come wet-lands as well as if the surplus water flowing into the stream during rainy season, released to the tanks of this areas, hundreds of acres of land will get the benefit of water supply ;

(*c*) whether estimate has been prepared in this behalf and the estimated cost of the same ;

(*d*) whether the Government intend to complete this work as early as possible ?

Sri S. B. NAGARAL (Minister of State for Minor Irrigation).—

(*a*) Yes.

(*b*) Yes.

(*c*) Yes. Rs. 95,000

(*d*) Yes.

ಶ್ರೀ ಕೆ. ಎಚ್. ಹನುಮೇಗೌಡ.—ಈ ನೀರಾವರಿ ಯೋಜನೆಯಿಂದ ಎಷ್ಟು ಎಕರೆಗೆ ನೀರಾವರಿಯಾಗುತ್ತದೆ.

† ಶ್ರೀ ಎಸ್. ಬಿ. ನಗರಾಳ್.—197 ಎಕರೆ.

ಶ್ರೀ ಕೆ. ಎಚ್. ಹನುಮೇಗೌಡ.—ಈ ವರ್ಷ ಇದನ್ನು ಸುರುಮಾಡಿಸುತ್ತೀರಾ ?

ಶ್ರೀ ಎಸ್. ಬಿ. ನಗರಾಳ್.—ಈ ವರ್ಷ ಈ ಕೆಲಸವನ್ನು ಸುರು ಮಾಡುತ್ತೇವೆಂದು ಹೇಳಿದ್ದೇವೆ. ಹೋದವರ್ಷವೇ ಮಾನ್ಯ ಸದಸ್ಯರಿಗೆ ಈ ವಿಚಾರ ಹೇಳಿದ್ದಾಗಿತ್ತು. ಕೆಲವು ತಾಂತ್ರಿಕ ತೊಂದರೆಗಳು ಹಿಂದೆ ಬಂದದ್ದರಿಂದ ಮಾಡುವುದಾಗಲಲ್ಲ. ಈ ವರ್ಷ ಅದನ್ನು ನಿಜವಾಗಿ ಸುರು ಮಾಡುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಮಳೆಗಾಲದಲ್ಲಿ ಹೆಚ್ಚಿಗೆ ಫ್ಲಡ್ ಬರುವುದರಿಂದ, ಇನ್ನೂ ಎರಡು ಮೈಲಿಗಳಷ್ಟು ಎಕ್ಸ್‌ಟೆಂಡ್ ಮಾಡಿ ಇನ್ನೂ ಎಂಟು ಹತ್ತು ಕೆರೆಗಳಿಗೆ ಮಳೆಗಾಲದಲ್ಲಿ ನೀರು ಹೆಚ್ಚಿಗೆ ಬರುವಂತೆ ಮಾಡುವುದಕ್ಕೆ ಏನಾದರೂ ಅವಕಾಶವಿದೆಯೇ ?

ಶ್ರೀ ಎಸ್. ಬಿ. ನಗರಾಳ್.—ಅದು ಸೊಕ್ಕವಾಗಿ ಕಂಡುಬಂದರೆ ಎರಡು ಮೈಲಿಗಳಷ್ಟು ಎಕ್ಸ್‌ಟೆಂಡ್ ಮಾಡಬಹುದು.